ದಿನಾಂಕಃ 23.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ**

6. ವಾದಿಯು 1992 ರಲ್ಲಿ ಮಹಾಂತಸ್ವಾಮಿ ಸಂಕಿನಮಠ ಅವರಿಂದ ಖರೀದಿಸಿದ ಆಸ್ತಿಗೆ ಸಂಬಂಧಪಟ್ಟಂತೆ ಆಗಿರುವ ಖರೀದಿಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಖರೀದಿಪತ್ರದಲ್ಲಿ ಖರೀದಿಸಿರುವ 4 ಟಾಕುಗಳ ಆಸ್ತಿಗಳ ಒಟ್ಟು ಚಕಬಂದಿಯನ್ನು ನಮೂದಿಸಲಾಗಿದೆ ಎಂದರೆ ಸರಿ. ದಕ್ಷಿಣ ಮತ್ತು ಪೂರ್ವ ದಿಕ್ಕುಗಳಿಗೆ ಚಕಬಂದಿಯ ಪ್ರಕಾರ ಸರಕಾರಿ ರಸ್ತೆ ಇದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ದಕ್ಷಿಣ ದಿಕ್ಕಿಗೆ ಸರಕಾರಿ ಜಾಗೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸರಕಾರಿ ಜಾಗಕ್ಕೆ ಸಂಬಂಧಿಸಿದ ಚಕಬಂದಿಯ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಸರಕಾರಿ ಜಾಗಕ್ಕೆ ಸಂಬಂಧಿಸಿದ ಚಕಬಂದಿಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ವಾದಿಯು ಖರೀದಿಸಿದ ಆಸ್ತಿಗೆ ಸಂಬಂದಿಸಿದಂತೆ ಆಗಿರುವ ಖರೀದಿಪತ್ರವನ್ನು ರದ್ದುಪಡಿಸುವಂತೆ ಕೋರಿ ಪ್ರಕರಣಗಳನ್ನು ದಾಖಲಿಸಿರುವುದಿಲ್ಲ.

7. ವಾದಿಯು ಈ ಪ್ರಕರಣದಲ್ಲಿ ಸಲ್ಲಿಸಿರುವ ಛಾಯಾಚಿತ್ರಗಳನ್ನು ನಾನು ನೋಡಿರುವುದಿಲ್ಲ. ನಿಪಿ-6 ರಲ್ಲಿ ಕಂಡು ಬರುವ ಮನೆಯು ವಾದಿಗೆ ಸೇರಿದ ಮನೆ ಎಂದರೆ ಸರಿ. ನಿಪಿ-5 ರಲ್ಲಿ ಕಂಡು ಬರುವಂತೆ ವಾದಿಯು ನೀಲಿ ಬಣ್ಣದ ಚಕ್ಕಡಿಯನ್ನು ನಿಲ್ಲಿಸಿದ್ದಾರೆ ಎಂದರೆ ಸರಿ. ವಾದಿಯು ನಿಲ್ಲಿಸಿರುವ ಚಕ್ಕಡಿ ಗಾಡಿಯ ಸ್ಥಳವೇ ವಿವಾದಿತ ಆಸ್ತಿ ಎಂದರೆ ಸರಿ. ಸದರಿ ಚಕ್ಕಡಿ ಗಾಡಿಗೆ ಹೊಂದಿಕೊಂಡಂತೆ ಇರುವ ರಸ್ತೆಯು ದಕ್ಷಿಣಕ್ಕೆ ಇರುವ ಸರಕಾರಿ ರಸ್ತೆ ಎಂದರೆ ಸರಿ. ನಿಪಿ-8 ರ ಛಾಯಾಚಿತ್ರದಲ್ಲಿ ಕಂಡು ಬರುವ ಕಲ್ಲಿನಿಂದ ನಿರ್ಮಿತವಾದ ಬಾವಿಯ ಪಕ್ಕಕ್ಕೆ ಅಂದರೆ ದ್ವಿಚಕ್ರ ವಾಹನವನ್ನು ನಿಲ್ಲಿಸಿರುವ ಸ್ಥಳವು ಓಡಾಡಲು ಉಪಯೋಗಿಸುವ ದಾರಿ ಕುರುಹುಗಳು ಇವೆ ಎಂದರೆ ಸಾಕ್ಷಿಯು ಅಲ್ಲಿ ದಾರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-8 ರ ಛಾಯಾಚಿತ್ರದಲ್ಲಿ ಕಂಡು ಬರುವಂತೆ ದ್ವಿಚಕ್ರ ವಾಹನವನ್ನು ನಿಲ್ಲಿಸಿರುವ ಎಡಭಾಗಕ್ಕೆ ಮತ್ತು ಮುಂದಿನ ಭಾಗಕ್ಕೆ ಮನೆಗಳು ಇವೆ ಎಂದರೆ ಸರಿ. ಸದರಿ ಮನೆಯ ಮಾಲೀಕರು ದ್ವಿಚಕ್ರ ವಾಹನವನ್ನು ನಿಲ್ಲಿಸಿರುವ ರಸ್ತೆಯ ಮೂಲಕವೇ ಓಡಾಡುತ್ತಾರೆ ಎಂದರೆ ಸರಿಯಲ್ಲ. ಸದರಿ ರಸ್ತೆಗೆ ಹೊಂದಿಕೊಂಡಂತೆ ಇರುವ ಕಾಲುವೆಗೆ ಅಡ್ಡಲಾಗಿ ಕಲ್ಲುಗಳನ್ನು ಜೋಡಿಸಲಾಗಿದೆ ಎಂದರೆ ಸರಿ. ನಿಪಿ-8 ರ ಛಾಯಾಚಿತ್ರದಲ್ಲಿ ಕಂಡು ಬರುವಂತೆ ದ್ವಿಚಕ್ರ ವಾಹನ ನಿಲ್ಲಿಸಿರುವ ಸ್ಥಳದಲ್ಲಿ ರಸ್ತೆ

ಇದ್ದರೂ ಮತ್ತು ಅದನ್ನು ಉಪಯೋಗಿಸುತ್ತಿದ್ದರೂ ವಾದಿಯ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ದ್ವಿಚಕ್ರ ವಾಹನವನ್ನು ನಿಲ್ಲಿಸಿರುವ ಸ್ಥಳದಲ್ಲಿ ದಾರಿ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಯ ಮೂಲಕವೇ ಎಲ್ಲಾ ಸಾರ್ವಜನಿಕರು ಓಡಾಡುತ್ತೇವೆ ಎಂದು ನುಡಿಯುತ್ತಾರೆ.

8. ದಾವಾ ಆಸ್ತಿಯಲ್ಲಿ ರಸ್ತೆ ಇದೆ ಎಂದು ಕೋರಿ ನ್ಯಾಯಾಲಯದಲ್ಲಿ ದಾವೆಗಳನ್ನು ಸಲ್ಲಿಸಿರುವುದಿಲ್ಲ. 2017 ರಲ್ಲಿ ದಾವಾ ಆಸ್ತಿಯ ಕಬ್ಜೆಯ ಬಗ್ಗೆ ವಾದಿ, ಮೃತ 1 ನೇ ಪ್ರತಿವಾದಿ ಹಾಗೂ ಉಳಿದ ಪ್ರತಿವಾದಿಗಳ ನಡುವೆ ವಿವಾದ ಆಗಿತ್ತು ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಯು ಚಕ್ಕಡಿ ಮತ್ತು ಗಳೆಗಳನ್ನು ಇರಿಸಲು ತೊಂದರೆ ಮಾಡಿದ ಕಾರಣಕ್ಕೆ ನಮ್ಮ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗಾಗಲೀ ಅಥವಾ ಇತರ ಪ್ರತಿವಾದಿಯರಿಗಾಗಲೀ ಯಾವುದೇ ರೀತಿಯ ಹಕ್ಕು ಇಲ್ಲದಿದ್ದರೂ ಸುಳ್ಳು ಸಂಗತಿಗಳುಳ್ಳ ಪ್ರತಿವಾದಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ-ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.